ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಲಯ ಯಾದಗಿರಿ.

ಸಿಸಿ ನಂ. **51/2020**

| | | |
|---|---|---|
| ಸಾಕ್ಷಿಯ ಹೆಸರುಃ | ಎನ್. ವೈ . ಗುಂಡುರಾವ್ | ಪ್ರಾಸಾಃ 1 |
| ತಂದೆ/ಗಂಡನ ಹೆಸರುಃ | ಯಲ್ಲಪ್ಪ | ಚಾಸಾಃ 1 |
| ವಯಸ್ಸು ಃ | 42 ವರ್ಷ | ದಿಃ 23-01-2025 |
| ಉದ್ಯೋಗಃ | ಸಿ.ಪಿ. ಐ. ದೇವದುರ್ಗ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ದೇವದುರ್ಗ | |

<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>

ನಾನು ದಿನಾಂಕಃ 28-06-2019 ರಿಂದ 03-02-2020 ರವರೆಗೆ ಸೈದಾಪೂರ ಪೋಲಿಸ ಠಾಣೆಯಲ್ಲಿ ನಾನು ಪಿ.ಎಸ್. ಐ. ಎಂದು ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕ 08-09-2019 ರಂದು ಬಾಡಿಯಾಳ ಗ್ರಾಮದಲ್ಲಿರುವ ನನಗೆಮಾಹಿತಿ ಬಂದ ಮೇರೇಗೆ ಪಂಚರಾದ ಚಾಸಾಃ 2 ಮತ್ತು 3 ರವರನ್ನು ಬರಮಾಡಿಕೊಂಡು ಚಾಸಾಃ 5 ರವರ ಮೂಲಕ ಬರಮಾಡಿಕೊಂಡು ದಾಳಿಯ ಬಗ್ಗೆ ಮಾಹಿತಿ ನೀಡಿರುತ್ತೇನೆ. ಅಂಬಿಗರ ಚೌಡಯ್ಯ ಕಟ್ಟೆ ಬಾಡಿಯಾಳದಿಂದ ಸಿಬ್ಬಂದಿ ಮತ್ತು ಪಂಚರೊಂದಿಗೆ ಸರಕಾರಿ ವಾಹನದ ಮೂಲಕ ಕಟಗರ ಓಣಿಗೆ ಹೋಗಿ ವಾಹವನ್ನು ನಿಲ್ಲಿಸಿ, ಕಿರಾಣಿ ಅಂಗಡಿಯ ಸ್ವಲ್ಪ ದೂರದಲ್ಲಿ ಮರೆಯಾಗಿ ನೋಡಿದಾಗ ಒಬ್ಬ ವ್ಯಕ್ತಿಯು ಸಾರ್ವಜನಿಕ ಮದ್ಯ ಮಾಡುವುದನ್ನ ಖಚಿತಪಡಿಸಿಕೊಂಡು, ದಾಳಿ ಮಾಡಿದಾಗ ಆರೋಪಿತನು ಅಲ್ಲಿಂದ ಓಡಿ ಹೋಗಿರುತ್ತಾನೆ. ಸ್ಥಳದಲ್ಲಿ 650 ಎಮ್. ಎಲ್. ನ ಕೆಎಫ್ 6 ಬಾಟಲಿಗಳು, 330 ಎಮ್, ಎಲ್ ನ 6 ಕೆಎಫ್ ಬಾಟಲಿಗಳು, 90 ಎಮ್ ಎಲ್ ಓರಿಜಿನಲ್ಲ ಚಾಯ್ಸ ಓಸಿ 39 ಪ್ಯಾಕೆಟಗಳು ಇದ್ದವು. ಚಾಸಾಃ 6 ಮತ್ತು 7 ರವರನ್ನು ಆರೋಪಿತನ ಬಗ್ಗೆ ಮಾಹಿತಿ ಕೇಳಲಾಗಿ ಅವನ ಹೆಸರು ಚಿರಂಜೀವಿ ತಂದೆ ಹಣಮಂತ ಎಂದು ಹೇಳಿರುತ್ತಾರೆ. ನಂತರ ಮು. ಮಾ. ಗಳನ್ನು ಜಪ್ತಿ ಪಡಿಸಿಕೊಂಡು ತಲಾ 2 ಬಾಟಲಿ ಮತ್ತು ಒಂದು ಟೆಟ್ರಾ ಪೌಚ್ ನ್ನು ಎಫ್ ಎಸ್, ಎಲ್ ಗಾಗಿ ತೆಗೆದುಕೊಂಡಿರುತ್ತೇವೆ. ಸ್ಥಳದಲ್ಲಿ 7.30 ರಿಂದ 8.30 ರವರೆಗೆ ಚಾಸಾಃ 4 ರವರ ಮಾಲಕ ಟೈಪ ಮಾಡಿಸಿ ಪಂಚನಾಮೆಯನ್ನು ಜರುಗಿಸಿರುತ್ತೇನೆ. 9.00 ಗಂಟೆಗೆ ಠಾಣೆಗೆ ಮರಳಿ ಪ್ರಕರಣದ ಮು. ಮಾ. ಮತ್ತು ವರದಿಯನ್ನು ದಾಖಲಾತಿಗಳನ್ನು ನೀಡಿರುತ್ತೇನೆ. ಜಪ್ತಿ ಪಂಚನಾಮೆಯನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-

1(ಎ) ಎಂದು ಗುರುತಿಸಲಾಯಿತು. ಮು. ಮಾ. 1 ರಿಂದ 3 ಎಂದು ಗುರುತಿಸಲಾಯಿತು. ಆರೋಪಿತನನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ.

ಪಾಟಿ ಸವಾಲುಃ ಆರೋಪಿತರ ಪರ ಶ್ರೀ . ಎಸ್. ಬಿ. ವಕೀಲರಿಂದ

1. ಸದರಿ ಮಾಹಿತಿ ಬಂದಾಗ ನಾನು ಬಾಡಿಯಾಳ ಗ್ರಾಮದಲ್ಲಿ ಇದ್ದೆ. ಚಾಸಾಃ 2 ಮತ್ತು 3 ರವರು ಬಾಡಿಯಾಳ ಗ್ರಾಮದಲ್ಲಿ ಇದ್ದರು. ಚಾಸಾಃ 5 ರವರು ಪಂಚರನ್ನು ಕರೆಸಿರುತ್ತಾರೆ. ಬಾಡಿಯಾಳ ಗ್ರಾಮ ಹೊಬಳಿ ಇರುತ್ತದೆ ಎಂದರೆ ಸರಿ. ಸದರಿ ಬಾಡಿಯಾಳ ಗ್ರಾಮದ ಘಟನಾ ಸ್ಥಳ ಕಟಗರ ಓಣಿಯಲ್ಲಿ ಬರುತ್ತದೆ. ಸದರಿ ಕಟಗರ ಓಣಿ ಯಾವ ದಿಕ್ಕಿಗೆ ಬರುತ್ತದೆ ಎಂದು ನನಗೆ ಮಾಹಿತಿ ಇಲ್ಲ. ಸದರಿ ಗುನ್ನೆ ಸ್ಥಳದಿಂದ ನಾವು ಮರೆಯಾಗಿ ನಿಂತಿರುವ ಸ್ಥಳ ಎಷ್ಟು ದೂರದಲ್ಲಿ ಇತ್ತು ಎಂದರೆ ಸಾಕ್ಷಿಯು 50 ಫೀಟ್ ದೂರ ಇತ್ತು ಎಂದು ನುಡಿಯುತ್ತಾರೆ. ನಾವು ಸ್ಥಳದಲ್ಲಿ ನಿಂತು ವೀಕ್ಷಣೆ ಮಾಡಿರುತ್ತೇವೆ. ನಾವು ಸಿಸಿ ರಸ್ತೆಯ ಹತ್ತಿರ ನಿಂತು ನೋಡಿರುತ್ತೇವೆ. ಸದರಿ ಬಾಡಿಯಾಳ ಗ್ರಾಮದಲ್ಲಿ ಮರೆಯಾಗಿ ನಿಂತಿರುವಾಗ ಸಂಜೆಃ 7.00 ಗಂಟೆಗೆ ಕತ್ತಲಾಗಿರುತ್ತದೆ ಎಂದರೆ ಸರಿ. ಸದರಿ ಕತ್ತಲು ಇರುವುದರಿಂದ ಯಾರೂ ಕಾಣಿಸಿರುವುದಿಲ್ಲ ಎಂದರೆ ಸಾಕ್ಷಿಯು ವಿದ್ಯುತ್ ಇತ್ತು ಎಂದು ನುಡಿಯುತ್ತಾರೆ. ನಾವು ವೀಕ್ಷಣೆ ಮಾಡಿದಾಗ 2 ರಿಂದ 3 ಜನ ಗ್ರಾಹಕರು ಸೇಂದಿ ತೆಗೆದುಕೊಂಡು ಹೋಗಿರುತ್ತಾರೆ. ಸದರಿ ಗ್ರಾಹಕರನ್ನು ಹಿಡಿಯಲು ಪ್ರಯತ್ನ ಮಾಡಿರುವುದಿಲ್ಲ. ಆರೋಪಿತನನ್ನು ಇದೇ ಮೊದಲನೆ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸಾಕ್ಷಿಯು ಘಟನಾ ಸ್ಥಳದಲ್ಲಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ.

2. ಸದರಿ ಜಪ್ತಿಪಡಿಸಿಕೊಂಡಿರುವ ಮು. ಮಾ. ಗಳು ಬಾಕ್ಸನಲ್ಲಿ ಪ್ರತ್ಯೇಕವಾಗಿ ಇದ್ದವು. ಸದರಿ ಜಪ್ತಿ ಪಂಚನಾಮೆಯನು ಸ್ಥಳದಲ್ಲಿಯೇ ಮಾಡಿರುತ್ತೇವೆ, ಚಾಸಾಃ 2 ಮತ್ತು 3 ರವರ ಸಹಿ ಸ್ಥಳದಲ್ಲಿಯೇ ತೆಗೆದುಕೊಂಡಿರುತ್ತೇವೆ. ಸದರಿ ಘಟನಾ ಸ್ಥಳದಲ್ಲಿ ಪ್ರಿಂಟರ್ ತೆಗೆದುಕೊಂಡು ಹೋಗಿರುತ್ತೇವೆ. ಸದರಿ ನಿಪಿ-1 ರಲ್ಲಿ ದಸ್ತು ಸಹಿ ಪಡೆದುಕೊಂಡಿರುವುದಿಲ್ಲ. ದಿನಾಂಕಃ 08-09-2018 ರಂದು ಘಟನಾ ಸ್ಥಳಕ್ಕೆ ಹೋಗದೇ ಇದ್ದರೂ ಕೂಡ, ಪಂಚನಾಮೆಯನ್ನು ಜರುಗಿಸದಿದ್ದರೂ ಕೂಡ ಠಾಣೆಯ ಅಂಕಿ-ಸಂಖ್ಯೆಗೋಸ್ಕರ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ